

ಬಾಗಲಕೋಟೆಯ ದೇವನಾಳ ಗ್ರಾಮದ ತಿರುಪತಿ ಭಂಗಿ ಕವಿ– ಕಥೆಗಾರರಾಗಿ ಸಹೃದಯರ ನಡುವೆ ಪರಿಚಿತರು. ಬಾಗಲಕೋಟೆಯ ಬಸವೇಶ್ವರ ಸಿ.ಬಿ.ಎಸ್.ಇ ಶಾಲೆಯಲ್ಲಿ ಕನ್ನಡ ಶಿಕ್ಷಕರು. 'ಕೈರೊಟ್ಟಿ', 'ಜಾತಿ ಕುಲುಮ್ಯಾಗ ಅರಳಿದ ಪ್ರೀತಿ' (ಕಥಾಸಂಕಲನ), 'ಫೋಬಿಯಾ' (ಕಾದಂಬರಿ) ಹಾಗೂ 'ಹೃದಯರಾಗ', 'ಅವ್ವ', 'ಕವಳೆಗಣ್ಣಿನ ಹುಡುಗಿ', 'ಮನಸು ಕೊಟ್ಟವಳು, 'ಅಪ್ಪ' (ಕವನ ಸಂಕಲನಗಳು) ಪ್ರಕಟಿತ ಕೃತಿಗಳು.

ಮೇಸಾಕ ಹೋಗುವ ಸೂಚನಾ ನೀಡಿದ್ಳು. ನಾನು ಅಕಿ ಮಾತಿಗೆ ತಲೆ ಅಲ್ಲಾಡಿಸಿದೆ.

ಮರುದಿನ ಪದ್ದಕ್ಕನ ಜೋಡಿ ಹಿರೇಗುಡ್ಡಕ ಹ್ವಾದಾಗ ಸೂರ್ಯದೇವ ನೆತ್ತಿಮ್ಯಾಲ ಬಂದಿದ್ದ. ಗುಡ್ಡದ ತುಂಬಾ ಹಚ್ಚಸರಾದ ಹುಲ್ಲು, ಆಕಾಶದಲ್ಲಿ ತೇಲುವ ಮೋಡಗಳು ಗುಡ್ಡದ ತುದಿಗೆ ತಾಗಿ ಹೋಗುವಂತೆ ಕಾಣುತ್ತಿದ್ದವು. ಸೂರ್ಯ ತನ್ನ ಪಾಡಿಗೆ ತಾನು ಮೇಲೆ ಉರಿಯುತ್ತಿದ್ದ. ನಮ್ಮ ಎಮ್ಮಿಗಳು ತಮ್ಮ ಪಾಡಿಗೆ ತಾವು ನೆಮ್ಮದಿಯಿಂದ ಮೇಯುತ್ತಿದ್ದವು.

ಪದ್ದಕ್ಕ ಹುರಗಡಲಿ ತಂದಿದ್ಳು. ನನಗೂ ಬೊಗಸೆ ತುಂಬಾ ಕೊಟ್ಟು, 'ಕುಟುಮ್ ಕುಟುಮ್' ತಿನ್ನುತ್ತ ನಾನು ಬೆರಗಾಗಿ ಹಿರೇಗುಡ್ಡವನ್ನೇ ನೋಡುತ್ತಿದ್ದೆ. ಮಳೆ ಆಗಿದ್ದರಿಂದ ಇಡೀ ಗುಡ್ಡವೆಲ್ಲ ಹಸಿರು ಜಮಕಾಣೆಯನ್ನು ಹೊದ್ದಂತೆ ಕಾಣುತ್ತಿತ್ತು. ಅಲ್ಲಿರುವ ಕಾರಿ ಹಣ್ಣು, ಕವಳೇ ಹಣ್ಣು ಪದ್ದಕ್ಕ ಗಿಡದಿಂದ ಬಿಡಿಸಿ ನನಗೆ ಕೊಟ್ಟು, ತಾನೂ ತಿನ್ನುತ್ತಿದ್ದಳು. ಮಸ್ಯಾಳ ಗಿಡ, ಅವರೆ ಗಿಡ, ಕಾರಿ ಕಂಟಿಗಿಡಾ, ರೊಟಗೊಳಕಿ, ಬೇವಿನ ಗಿಡ, ಥರಾವರಿ ಗಿಡಗಳು ಹಚ್ಚ ಹಸಿರಾದ ಎಲೆಗಳನ್ನು ಹೊತ್ತುಕೊಂಡು ಇಡೀ ಗುಡ್ಡದ ಸೊಬಗನ್ನು ಹೆಚ್ಚಿಸಿದ್ದವು. ಗುಡ್ಡದ ತುತ್ತ ತುದಿಯಲ್ಲಿ ನಿಂತು ನೋಡಿದರೆ ನಾನು ಯಾವುದೋ ಅನ್ಯ ಗ್ರಹಕ್ಕೆ ಬಂದಂತೆ ನನಗನಿಸತೊಡಗಿತು.

ತುದಿ ಗುಡ್ಡದ ಮೇಲೆ ನಿಂತು, ಕೂಗು ಹೊಡೆದರೆ ಇಡೀ ಗುಡ್ಡದ ತುಂಬಾ ಮಾರ್ದನಿ ಮೂಡುತ್ತಿತ್ತು. ನೋಟ ಹರಿಬಿಟ್ಟರೆ, ಸುತ್ತಮುತ್ತಲಿರುವ ನಾಕಾರು ಹಳ್ಳಿಗಳು ಕಾಣುತ್ತಿದ್ದವು. ತುಂಬಿ ಹರೆಯುವ ಘಟಪ್ರಭೆಯೂ ಗುಡ್ಡದ ಏರಿನಲ್ಲಿ ನಿಂತು ನೋಡಿದಾಗ ಹರಿಯುವ ಹಾವಿನಂತೆ ತೋರುತ್ತಿತ್ತು. ನಾನು ನಿಜಕ್ಕೂ ಗುಡ್ಡ ನೋಡುತ್ತಾ ಬೆರಗುಗೊಂಡೆ.

ಪದ್ದಕ್ಕ ಒಂದ ಗಿಡದ ನೆರಳಿಗೆ ಕುಂತು ಏನೇನೋ ತರ್ಕಿಸುತ್ತಾ, ಚಿಂತಿಸುತ್ತಾ, ಯೋಚಿಸುತ್ತಾ ಕುಳಿತವಳಂತೆ ಕಾಣುತ್ತಿದ್ದಳು. ನಾನೊಬ್ಬನೇ ಗುಡ್ಡ ಹತ್ತಿ ಇಳಿದು ಬರುವ ಹೊತ್ತಿಗೆ ನನ್ನ ಹೊಟ್ಟೆ ತಾಳ ಹಾಕುತ್ತಿತ್ತು. 'ಮಂಗ್ಯಾನ ಕಟ್ಟಿ ನೋಡು, ಸಾಲಿ ಹುಡುಗುರ್ನ ಬಿಟ್ಟನೋಡು' ಅಂತಾರಲ್ಲ ಅದ ಖರೇ ನೋಡ ಹನಮಾ. 'ಗುಡ್ಡಾ ಕಂಡಿಯಿಲ್ಲೋ ಹಂಗ್ಯಾಕ ಕಾಣಲಾರದ್ದಂಗ ಕಪ್ಪರಿಸಿಕೊಂಡ ಓಡಿದಿ, ಮ್ಯಾಲ ಹೋಗಿ, ಕೂಗ ಬಡಿದಿ, ಗುಡ್ಡ ಅಂದ್ರ ನಿನಗ ಅಷ್ಟ ಹಿಗ್ಗೇನು?' ಪದ್ದಕ್ಕ ಕೇಳಿದಕ್ಕ. ನಾನು 'ಹೂಂ' ಅಂತ ಬರೀ ತಲಿ ಅಲ್ಲಾಡಿಸಿದೆ ಅಷ್ಟೇ.

ಇಬ್ಬರೂ ಮನೆಯಿಂದ ಕಟ್ಟಿ ತಂದ ಬುತ್ತಿ ಬಿಚ್ಚಿ ತಿಂದು. ಮಸ್ಯಾಳ ಗಿಡದ ನೆಳ್ಳಿನ ಕೆಳಗೆ ಅಡ್ಡಾದೆವು. ಮೇಲೆ ಮುಗಿಲಲ್ಲಿ ಬಿಳಿ ಮೋಡಗಳು ಆಟ ಆಡುತ್ತಿದ್ದವು. ಗಾಳಿ ಒಂಚೂರೂ ಇರಲಿಲ್ಲ. ವಿಮಾನವೊಂದು ಅದೇ ಹೊತ್ತಿಗೆ ಸದ್ದು ಮಾಡಿಕೊಂಡು ಹೊರಟಿತ್ತು.

'ಈ ಇಮಾನ ಯಾವೂರಿಗೆ ಹೊಂಟೈತಿಲಾ' ಅಂದ್ಳು. ನಾನು ಗಲಿಬಿಲಿಗೊಂಡೆ. ದೊಡ್ಡ ಶ್ಯಾನ್ಯಾನಗತೆ, 'ಇನ್ನೆಲ್ಲಿಗೆ ಹೊಕ್ಕೈತಿ ಅದ ಬೆಂಗಳೂರಿಗೆ' ಅನ್ನುವಾಗ ನನಗೆ ಮತ್ತೇನು ಕೇಳ್ತಾಳೆ ಅನ್ನುವ ಆತಂಕವಿತ್ತು.

'ಈಗ ಬಲಕ್ಕ ಹೊಂಟೈತಿ ಬೆಂಗ್ಳೂರಂದೀ, ಮತ್ತss ಎಡಕ್ಕ ಹ್ವಾದ್ರ ಯಾವೂರಿಗೆ ಹೊಕ್ಕೈತಿ' ಮರುಪ್ರಶ್ನೆ ಮಾಡಿದ್ಳು.

'ಎಡಕ್ಕ ಹ್ವಾದ್ರ ಬಾಂಬೆಗೆ ಹೊಕ್ಕೈತಿ' ಅಂದೆ. ನಿಮ್ಮ ಸಾಲ್ಯಾಗ ಇಮಾನದ ಬಗ್ಗೆನೂ ಕಲಸ್ತಾರನ ಸರ್‌ಗೋಳು ಅನ್ನುವಾಗ, ನಾನು ಆಗ ಪ್ಯಾಪ್ಯಾ ಪ್ಯಾಲಿಗತೆ ಮಾಡಿದೆ. ಅಕಿ ನಕ್ಕು ಸುಮ್ನಾದ್ಳು.